ಆಧುನಿಕ ಜಗತ್ತಿನಲ್ಲಿ ಯಂತ್ರಗಳಿಗೆ ಅವುಗಳದೇ ಆದ ಸ್ಥಾನವಿದೆ. ಆ ಸ್ಥಾನವನ್ನು ಬದಲಾಯಿಸುವುದು ಕಷ್ಟ. ಆದರೆ ಈ ಜಗತ್ತಿನಲ್ಲಿ ಶ್ರಮಜೀವಿಗಳ ಸ್ಥಾನವನ್ನು ಕಸಿಯುವುದಕ್ಕೆ ಯಂತ್ರಗಳಿಗೆ ಆಸ್ಪದವಿರಬಾರದು. ಶ್ರಮಿಕರ ಸ್ಥಾನವನ್ನು ಯಂತ್ರಗಳು ಕಸಿಯುತ್ತಾ ಹೋದಂತೆ ದುಡಿಯುವ ಕೈಗಳಿಗೆ ಅವಕಾಶಗಳು ಇಲ್ಲವಾಗುತ್ತವೆ. ದುಡಿದು ಉಣ್ಣುವವರು ಹಸಿವಿನಿಂದ ನರಳುವಂತಾಗುತ್ತದೆ. ಅವರ ಕೌಶಲ್ಯ ತಗ್ಗುತ್ತದೆ. ಇದು ಅಪಾಯಕಾರಿ ಸ್ಥಿತಿ. ಹಾಗಾಗಿ ಎಲ್ಲರ ಹಿತವನ್ನು ಕಾಪಾಡಬಲ್ಲ ಯಂತ್ರ ವ್ಯವಸ್ಥೆ ಮಾತ್ರ ಕಾನೂನುಬದ್ಧವೆನಿಸುತ್ತದೆ. ಇಲ್ಲವಾದರೆ ಅಂಥ ವ್ಯವಸ್ಥೆಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕಾಗುತ್ತದೆ.

ಭಾರತವನ್ನು ಆರ್ಥಿಕ ದಿವಾಳಿತನದಿಂದ ಪಾರುಮಾಡಬಲ್ಲ, ದುಡಿಯುವ ಕೈಗಳಿಗೆ ಕೆಲಸ ಹಂಚಬಲ್ಲ ಯಂತ್ರ ವ್ಯವಸ್ಥೆಯನ್ನು ನಾನು ಸ್ವಾಗತಿಸುತ್ತೇನೆ. ಚರಕದಿಂದ ನೂಲುವುದು ಅಂತಹ ಒಂದು ವಿಧಾನ. ಸಮಾಜದ ದಾರಿದ್ರ್ಯವನ್ನು ತೊಲಗಿಸಲು ಮತ್ತು ನಿರುದ್ಯೋಗವನ್ನು ಕಡಿಮೆ ಮಾಡಲು ಚರಕವೇ ಅತ್ಯುತ್ತಮ ಸಾಧನ. ಚರಕವು ಯಂತ್ರದ ಮೂರ್ತ ರೂಪ ಮತ್ತು ಯಂತ್ರದ ಸಾರ್ಥಕ ರೂಪ ಕೂಡ!

◆ **ಪ್ರಶ್ನೆ: ಹಾಗಾದರೆ ಚರಕವನ್ನುಳಿದು ಇತರೆಲ್ಲ ಯಂತ್ರಗಳನ್ನೂ ನೀವು ವಿರೋಧಿಸುವಿರೇನು?**

ಗಾಂಧೀಜಿ: ಖಂಡಿತವಾಗಿಯೂ ಇಲ್ಲ. ಆದರೆ ದುಡಿಯುವವರಿಗೆ ಕೆಲಸದ ಹಂಚಿಕೆ ಮಾಡದ ಯಂತ್ರ ವ್ಯವಸ್ಥೆಗೆ ನನ್ನ ವಿರೋಧವಿದೆ. ಇಂತಹ ವ್ಯವಸ್ಥೆಯ ಪ್ರಾಬಲ್ಯವನ್ನು ನಾನು ಒಪ್ಪಲಾರೆ. ಶ್ರಮವನ್ನು ಕಡಿಮೆ ಮಾಡಬಲ್ಲ ಸರಳ ಯಂತ್ರ ಸಾಧನಗಳನ್ನು ನಾನು ಸ್ವಾಗತಿಸುತ್ತೇನೆ. ನನ್ನ ವಿರೋಧವಿರುವುದು ಯಂತ್ರಗಳ ಮೇಲೆ ಮನುಷ್ಯರಿಗಿರುವ ವ್ಯಾಮೋಹದ ಬಗ್ಗೆ. ದೈಹಿಕ ಶ್ರಮದಿಂದ ಪಾರುಮಾಡುವ ವ್ಯವಸ್ಥೆ ಎಂದು ಯಾವುದನ್ನು ಪ್ರತಿಪಾದಿಸಲಾಗಿದೆಯೋ ಅಂತಹ ವ್ಯವಸ್ಥೆಯ ಬಗ್ಗೆ. ಯಾವ ವ್ಯವಸ್ಥೆ ದುಡಿಯುವವರನ್ನು ಕ್ರಮೇಣ ನಿರುದ್ಯೋಗಿಗಳನ್ನಾಗಿ ಮಾಡುವುದೋ, ಸಮಯವನ್ನು ಉಳಿಸುವ ನೆಪದಲ್ಲಿ ಶ್ರಮಜೀವಿಗಳ ಬಲಿ ತೆಗೆದುಕೊಳ್ಳುವುದೋ ಅಂತಹ ವ್ಯವಸ್ಥೆಯ ಬಗ್ಗೆ.

ಶ್ರಮದ ಪ್ರತಿಫಲವನ್ನು ಸಮನಾಗಿ ಹಂಚದಿರುವ, ಸಂಪತ್ತಿನ ಏಕಸ್ವಾಮ್ಯಕ್ಕೆ ಇಂಬು ಕೊಡುವ ವ್ಯವಸ್ಥೆ ಸಮಾಜಕ್ಕೆ ಕಂಟಕ ಎಂದು ನಂಬುವವನು ನಾನು. ಆದರೆ ಸಂಪತ್ತಿನ ಸ್ವಾಮ್ಯಕ್ಕೆ ಒತ್ತಾಸೆಯಾಗುವ ಮತ್ತು ಶ್ರಮದ ಮೌಲ್ಯವನ್ನು ತಗ್ಗಿಸುವ ಕೆಲಸವನ್ನು ಆಧುನಿಕ ಯುಗದಲ್ಲಿ ಯಂತ್ರಗಳು ಮಾಡುತ್ತಿವೆ. ಈ ಯಂತ್ರಗಳ ಉಬ್ಬರದ ಹಿಂದಿರುವುದು ಶ್ರಮವನ್ನು ಕಡಿಮೆ ಮಾಡಬೇಕು ಎಂಬ ಕಾಳಜಿ ಅಲ್ಲ, ಹೆಚ್ಚು ಹಣ ಗಳಿಸುವ ಹಪಹಪಿ. ನನ್ನ ಹೋರಾಟವಿರುವುದು ಇಂಥ ಪ್ರವೃತ್ತಿಯ ವಿರುದ್ಧ ಮಾತ್ರವೇ.

◆ **ಪ್ರಶ್ನೆ: ಅಂದಮೇಲೆ ನೀವು ಬರೀ ಯಂತ್ರಗಳ ವಿರುದ್ಧ ಮಾತ್ರವಲ್ಲ, ಅವುಗಳಿಂದ ಉಂಟಾಗುವ ಸಾಮಾಜಿಕ ಕೆಡುಕುಗಳ ವಿರುದ್ಧವೂ ಹೋರಾಡುತ್ತಿದ್ದೀರಿ ಎಂದಾಯ್ತು.**

ಗಾಂಧೀಜಿ: ನಿಸ್ಸಂದೇಹವಾಗಿ. ದುಡಿಮೆಗೆ ಪೂರಕವಾಗಿ ಯಂತ್ರಗಳು ಒದಗಿ ಬರುವಂತಾಗಬೇಕೇ ಹೊರತು ದುಡಿಮೆಯನ್ನು ಕಸಿಯುವಂತಿರಬಾರದು. ವಿಜ್ಞಾನದ ಸಂಶೋಧನೆಗಳು, ಸಾಧನಗಳು ಮನುಷ್ಯರಲ್ಲಿ ಲಾಲಸೆಯನ್ನು ಹುಟ್ಟಿಸುವಂತಿರಬಾರದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯ ಸಮಾಜದಲ್ಲಿ ಯಂತ್ರಗಳ ಬಳಕೆ ಒಂದು ಮಿತಿಯಲ್ಲಿರಬೇಕು.